ಸಂಖ್ಯೆ:PCCF(HOFF)/CR. 21/D.1/BUD/2018-19

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ಇವರ ಕಛೇರಿ
ಬೆಂಗಳೂರು, ದಿನಾಂಕ **26-03-2018**

## ಸುತ್ತೋಲೆ

ವಿಷಯ:- **"ಅರಣ್ಯಾಭಿವೃದ್ಧಿ ಶುಲ್ಕ"ವನ್ನು (Forest Development Fee) ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲು ಹೊಸ ಲೆಕ್ಕ ಶೀರ್ಷಿಕೆ ಸೃಷ್ಟಿಯಾಗಿರುವ ಬಗ್ಗೆ.**

ಉಲ್ಲೇಖ:- 1. ಸರ್ಕಾರದ ಅಧಿಸೂಚನೆ ಸಂಖ್ಯೆ ಅಪಜೀ 248 ಎಫ್‌ಡಿಪಿ 2016 ದಿನಾಂಕ 16-08-2008.
2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 32 ಶಾಸನ 2015 ದಿನಾಂಕ 23-12-2015.
3. ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 32 ಶಾಸನ 2016 ದಿನಾಂಕ 27-07-2016.

ಕರ್ನಾಟಕ ಅರಣ್ಯ ಕಾಯ್ದೆ-1963ರ ಸೆಕ್ಷನ್ 98(ಎ)ರ ಪ್ರಕಾರ ಮತ್ತು ಸರ್ಕಾರವು ಕಾಲಕಾಲಿಕವಾಗಿ ಹೊರಡಿಸಿರುವ ತಿದ್ದುಪಡಿ ಆದೇಶಗಳು ಮತ್ತು ಅಧಿಸೂಚನೆಗಳ ಪ್ರಕಾರ ಅರಣ್ಯ ಇಲಾಖೆ ಮತ್ತು ಅರಣ್ಯ ನಿಗಮಗಳು ಮಾರಾಟ ಮಾಡುವ ಅರಣ್ಯ ಉತ್ಪನ್ನಗಳು ಹಾಗೂ ಅರಣ್ಯಗಳಿಂದ ಸಂಗ್ರಹಿಸಿ, ಸಾಗಣಿಕೆ ಮಾಡುವ ಖನಿಜಗಳ ಮೇಲೆ ಅರಣ್ಯಾಭಿವೃದ್ಧಿ ಶುಲ್ಕವನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ. ಈ ರೀತಿ ಸಂಗ್ರಹಿಸುವ ಅರಣ್ಯಾಭಿವೃದ್ಧಿ ಶುಲ್ಕವನ್ನು "0045-Other Taxes & Duties on Commodites and Services-00-115-Forest Development Tax-0-01-Fee Collections" (0045-00-115-0-01) ಎಂಬ ಸವಿವರ ಲೆಕ್ಕ ಶೀರ್ಷಿಕೆಯ ಮೂಲಕ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡಲಾಗುತ್ತಿದೆ.

ಈಗ ಸರ್ಕಾರವು 2018-19ನೇ ಸಾಲಿನ ಆಯವ್ಯಯ ಸವಿವರ ರಾಜಸ್ವ ಮತ್ತು ಇತರೆ ಜಮೆಗಳ ಸವಿವರ ಅಂದಾಜುಗಳ ಸಂಪುಟದಲ್ಲಿ ಅರಣ್ಯಾಭಿವೃದ್ಧಿ ಶುಲ್ಕವನ್ನು ಸರ್ಕಾರದ ಲೆಕ್ಕಕ್ಕೆ ಜಮೆ ಮಾಡುವ ಸಲುವಾಗಿ ಹೊಸ ಲೆಕ್ಕ ಶೀರ್ಷಿಕೆಯನ್ನು ಸೃಷ್ಟಿಸಿ ಅರಣ್ಯಾಭಿವೃದ್ಧಿ ಶುಲ್ಕವನ್ನು ಜಮೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಈ ಹಿನ್ನಲೆಯಲ್ಲಿ ಈ ಮುಂದಿನ ಅಂಶಗಳನ್ನು ಸ್ಪಷ್ಟಪಡಿಸಿದೆ.

1. 2018-19ನೇ ಸಾಲಿನಿಂದ "0045-Other Taxes & Duties on Commodites and Services-00-115-Forest Development Tax-0-01-Fee Collections" (0045-00-115-0-01) ಎಂಬ ಸವಿವರ ರಾಜಸ್ವ ಲೆಕ್ಕ ಶೀರ್ಷಿಕೆಯು ಅಸ್ತಿತ್ವದಲ್ಲಿ ಇರುವುದಿಲ್ಲ. ಆದ ಕಾರಣ ಅರಣ್ಯಾಭಿವೃದ್ಧಿ ಶುಲ್ಕವನ್ನು ಈ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಬಾರದು.
2. **2018-19ನೇ ಸಾಲಿನಿಂದ ದಿನಾಂಕ: 01-04-2018 ರಿಂದ ಜಾರಿಗೆ ಬರುವಂತೆ ಅರಣ್ಯಾಭಿವೃದ್ಧಿ ಶುಲ್ಕವನ್ನು ಹೊಸದಾಗಿ ಸೃಷ್ಟಿಸಿರುವ "0406-Forestry & Wildlife-01-Forestry-800-Other Receipts-0-12-Forest Development Fee Collection" (0406-01-800-0-12) ಎಂಬ ಸವಿವರ ರಾಜಸ್ವ ಲೆಕ್ಕ ಶೀರ್ಷಿಕೆಗೆ ಮಾತ್ರ ಜಮಾ ಮಾಡತಕ್ಕದ್ದು.**
3. ದಿನಾಂಕ 01-04-2018ರಿಂದ ಜಾರಿಗೆ ಬರುವಂತೆ ಅರಣ್ಯಾಭಿವೃದ್ಧಿ ಶುಲ್ಕದ ಜಮೆಗಾಗಿ ಸೃಷ್ಟಿಯಾಗಿರುವ ಹೊಸ ಲೆಕ್ಕ ಶೀರ್ಷಿಕೆ "0406-Forestry & Wildlife-01-Forestry-800-Other Receipts-0-12-Forest Development Fee Collection" (0406-01-800-0-12) ಇದರ ಮಾಹಿತಿಯನ್ನು ಆಯಾ ಘಟಕ/ವೃತ್ತ/ವಿಭಾಗದ ಮುಖ್ಯಸ್ಥರು ತಮ್ಮ ಅಧೀನದ ಎಲ್ಲಾ ಅಧಿಕಾರಿಗಳು, ಹಣ ಬಟವಾಡೆ ಮತ್ತು ಜಮೆ ಮಾಡುವ ಎಲ್ಲಾ ಅಧೀನ ಕಛೇರಿಗಳ ಗಮನಕ್ಕೆ ತಂದು ಅರಣ್ಯಾಭಿವೃದ್ಧಿ ಶುಲ್ಕವು ಹೊಸ ಲೆಕ್ಕ ಶೀರ್ಷಿಕೆಗೆ ಜಮೆಯಾಗುವಂತೆ ನೋಡಿಕೊಳ್ಳುವುದು. **ಈ ಬಗ್ಗೆ ಎಲ್ಲರಿಗೂ ಸೂಕ್ತವಾದ ತಿಳುವಳಿಕೆ/ಸೂಚನಾ ಪತ್ರಗಳನ್ನು ಈ ದಿನವೇ ಹೊರಡಿಸುವುದು.**
4. ಅರಣ್ಯ ಇಲಾಖೆ ಹೊರತುಪಡಿಸಿ ಅರಣ್ಯಾಭಿವೃದ್ಧಿ ಶುಲ್ಕವನ್ನು ಪಾವತಿಸುವ ನಿಗಮಗಳು/ಇತರೆ ಇಲಾಖೆ/ ಸಂಸ್ಥೆಗಳು/ತತ್ಸಂಬಂಧಿತರಿಗೂ ಸಹ ಈ ಬಗ್ಗೆ ಸೂಕ್ತ ತಿಳುವಳಿಕೆ/ಸೂಚನಾ ಪತ್ರಗಳನ್ನು ಕಳುಹಿಸುವುದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು.

ಇವರಿಗೆ.

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು/ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ ಬೆಂಗಳೂರು.

ಪುಟ-2ರಲ್ಲಿ ಮುಂದುವರದಿದೆ/-

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಪನ್ಮೂಲ ನಿರ್ವಹಣೆ/E.W.P.R.T./ ಕಾರ್ಯಯೋಜನೆ/ಯೋಜನೆಗಳು/ಭೂದಾಖಲೆ/ಎನ್.ಎಫ್.ಎ.ಪಿ ಮತ್ತು ಬಾಂಬು ಮಿಷನ್/ಅಭಿವೃದ್ಧಿ/ ಜಾಗೃತ/ಸಿಬ್ಬಂದಿ ಮತ್ತು ನೇಮಕಾತಿ/ಸಂಪರ್ಕ ಮತ್ತು ಮಾಹಿತಿ/ಕೇಂದ್ರಸ್ಥಾನ ಮತ್ತು ಸಮನ್ವಯ/ಅರಣ್ಯ ಸಂರಕ್ಷಣೆ/ ವನ್ಯಜೀವಿ/ಕಾಂಪಾ/ಸಾಮಾಜಿಕ ಅರಣ್ಯ/ಸಂಶೋಧನೆ ಮತ್ತು ಬಳಕೆ ಬೆಂಗಳೂರು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಕರ್ನಾಟಕ ತರಬೇತಿ ಅಕಾಡೆಮಿ ಧಾರವಾಡ/ಹುಲಿ ಯೋಜನೆ ಮೈಸೂರು/ಶಿವಮೊಗ್ಗ.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
7. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೇಂದ್ರಸ್ಥಾನ/ಕಾನೂನು ಕೋಷ/ಮಾಹಿತಿ ಸಂವಹನ ಕೇಂದ್ರ/ ಮೌಲ್ಯಮಾಪನ/ಅರಣ್ಯ ಸಂಪನ್ಮೂಲ ನಿರ್ವಹಣೆ/ಬಜೆಟ್ ಮತ್ತು ಆಡಿಟ್/ಅರಣ್ಯ ಸಂರಕ್ಷಣೆ/ಆನೆ ಯೋಜನೆ ಬೆಂಗಳೂರು.
8. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ವೃತ್ತ.
9. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ/ಕಾರ್ಯಯೋಜನೆ ಘಟಕಗಳು.
10. ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು.
11. ಅರಣ್ಯ ಸಂರಕ್ಷಣಾಧಿಕಾರಿಗಳು ಹುಲಿ ಯೋಜನೆ ಘಟಕಗಳು.
12. ಅರಣ್ಯ ಸಂರಕ್ಷಣಾಧಿಕಾರಿ, ಯೋಜನೆಗಳು, ಅಭಿವೃದ್ಧಿ ಬೆಂಗಳೂರು/ಜಾಗೃತ ಬೆಂಗಳೂರು.
13. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ/ವನ್ಯಜೀವಿ ವಿಭಾಗ/ಅರಣ್ಯ ಸಂಚಾರಿ ದಳ/ಸಾಮಾಜಿಕ ಅರಣ್ಯ (ಸಂಶೋಧನೆ) ಬೆಂಗಳೂರು/ತರಬೇತಿ ಸಂಸ್ಥೆಗಳು/ಸಾಮಾಜಿಕ ಅರಣ್ಯ ವಿಭಾಗಗಳು/ಕಾರ್ಯಯೋಜನೆ ಘಟಕಗಳು.
14. ಉಪ ಅರಣ್ಯ ಸಂರಕ್ಷಣಾಧಿಕಾರಿ, (ಕೇಂದ್ರ ಸ್ಥಾನ) ಬೆಂಗಳೂರು.
15. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳಕೆ ಉಪ ವಿಭಾಗ (ಸಂಶೋಧನೆ) ಬೆಂಗಳೂರು.
16. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ ರಾಣೇಬೆನ್ನೂರು.
17. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ತರಬೇತಿ ಸಂಸ್ಥೆ, ಕುಶಾಲನಗರ/ಇಲವಾಲ ಮೈಸೂರು/ಬೀದರ್/ ತಟ್ಟಿಹಳ್ಳ.
18. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು.
19. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
20. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
21. ಮುಖ್ಯ ಯೋಜನಾ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ಯೋಜನೆ, ಕೆ.ಆರ್. ಸರ್ಕಲ್ ಅನೆಕ್ಸ್, ಕೆ.ಆರ್. ಸರ್ಕಲ್ ಬೆಂಗಳೂರು.
22. ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು.
23. ಈ ಕಛೇರಿಯ ಆಡಳಿತಾಧಿಕಾರಿಗಳು, ಆಡಳಿತ ಸಹಾಯಕರು ಮತ್ತು ಪತ್ರಾಂಕಿತ ವ್ಯವಸ್ಥಾಪಕರು.
24. ಈ ಕಛೇರಿಯ ಎ-1/ಎ-2/ಎ-3/ಎ-4/ಬಿ-1/ಬಿ-2/ಬಿ-3/ಬಿ-4/ಬಿ-5/ಬಿ-6/ಬಿ-9/ಬಿ-10/ಬಿ-11/ಎಸ್‌ಟಿಎಸ್ ಶಾಖೆ/ ಆಡಿಟ್ ಶಾಖೆ ಮತ್ತು ಆಂತರಿಕ ಲೆಕ್ಕ ತಪಾಸಣಾ ಶಾಖೆ.